ಆ) ಚೈನಾ ದೇಶದಿಂದ ಆಮದು ಮಾಡಿಕೊಳ್ಳುವ ಕಚ್ಚಾ ರೇಷ್ಮೆಗೆ ಆಮದು ಸುಂಕವನ್ನು (ಇಂಪೋರ್ಟ್‌ಡ್ಯೂಟಿ) ಶೇಕಡ 30 ರಿಂದ 5ಕ್ಕೆ ಇಳಿಸಿರುವುದರಿಂದ ಮಾರುಕಟ್ಟೆಯಲ್ಲಿ ರೇಷ್ಮೆ ಬೆಲೆ ಕಡಿಮೆಯಾಗಿರುತ್ತದೆ. ಇದರಿಂದ ನೇಕಾರರಿಗೆ ಅನುಕೂಲವಾಗಿರುತ್ತದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ/ಸಹಕಾರ ಸಂಘಗಳು, ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್/ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ಮುಖಾಂತರ ಖರೀದಿಸುವ ರೇಷ್ಮೆಗೆ ಕಚ್ಚಾಮಾಲು ಸಹಾಯಧನವಾಗಿ ಪ್ರತಿ ಕೆ.ಜಿ.ಗೆ ರೂ. 15.00 ರಂತೆ ರಾಜ್ಯ ಸರ್ಕಾರದಿಂದ ನೀಡಲಾಗುತ್ತಿದೆ.

ಇ) ರೇಷ್ಮೆ ನೇಕಾರರು ತಯಾರಿಸಿದ ರೇಷ್ಮೆ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಸೌಲಭ್ಯ ಒದಗಿಸಲು ಸರ್ಕಾರವು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

1) ಕೈಮಗ್ಗ ಸಹಕಾರ ಸಂಘಗಳು/ನಿಗಮ/ಮಂಡಳಿಗಳು ವರ್ಷದಲ್ಲಿ 135 ದಿವಸಗಳ ರಿಬೇಟ್ ಅವಧಿಯಲ್ಲಿ ಮಾರಾಟ ಮಾಡುವ ರೇಷ್ಮೆ ಉತ್ಪನ್ನಗಳಿಗೆ ಶೇಕಡ 20ರ ರಿಬೇಟ್ ನೀಡಲಾಗುತ್ತಿದೆ.

2) ರೇಷ್ಮೆ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಸೌಲಭ್ಯ ಒದಗಿಸಲು ವಸ್ತುಪ್ರದರ್ಶನ ಹಾಗೂ ಮಾರಾಟ ಮೇಳಗಳನ್ನು ಆಯೋಜಿಸಲಾಗುತ್ತದೆ.

ಅ) ಜಿಲ್ಲಾ ಮಟ್ಟದ ಕೈಮಗ್ಗ ಮೇಳ

ಆ) ರಾಜ್ಯ ಮಟ್ಟದ ಕೈಮಗ್ಗ ಮೇಳ

ಇ) ವಿಶೇಷ ಕೈಮಗ್ಗ ಮೇಳ

ಈ) ರಾಷ್ಟ್ರೀಯ ಕೈಮಗ್ಗ ಮೇಳ

3) ಹೊರರಾಜ್ಯಗಳಲ್ಲಿ ಏರ್ಪಡಿಸುವ ಮಾರಾಟ ಮೇಳಗಳಲ್ಲಿ ನಿಗಮ/ಮಂಡಳಿಗಳು/ ಕೈಮಗ್ಗ ಸಹಕಾರ ಸಂಘಗಳೂ ಭಾಗವಹಿಸಲು ಪ್ರಾಯೋಜಿಸಲಾಗುತ್ತಿದೆ.

ರಾಜ್ಯ & ರಾಷ್ಟ್ರೀಯ ಹೆದ್ದಾರಿಗಳ ಪೈಕಿ ದೀರ್ಘಕಾಲದ ಮರಗಳನ್ನು ಬೆಳೆಸುವುದು

60 (265) ಶ್ರೀ ಎಸ್. ಆರ್. ವಿಶ್ವನಾಥ್ (ಯಲಹಂಕ):– ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಎರಡು ಬದಿಗಳಲ್ಲಿ ದೀರ್ಘಕಾಲದ

ಮರಗಳಾದ ಮಾವು, ನೇರಳೆ, ಹುಣಸೆ, ಹಿಪ್ಪೆ, ಆಲ, ಹಲಸು ಇತ್ಯಾದಿ ಫಲ ಬಿಡುವ ಮರಗಳನ್ನು ನೆಡುವುದನ್ನು ನಿಲ್ಲಿಸಿ ತಾತ್ಕಾಲಿಕವಾಗಿ ಬೇಗ ಬೆಳೆದು ಗಾಳಿ, ಮಳೆಗೆ ಬೀಳುವ ಮರಗಳನ್ನು ಬೆಳೆಸುತ್ತಿದ್ದು ಇದರಿಂದ ಪ್ರಾಣಿ, ಪಶು, ಪಕ್ಷಿಗಳಿಗೆ ಆಹಾರದ ಕೊರತೆಯಿಂದ ನಾಡಿಗೆ ಬಂದು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಸ್ತೆಬದಿ, ಕೆರೆಗಳ ಬದಿ, ಗುಂಡು ತೋಪುಗಳಲ್ಲಿ ಹಾಗೂ ಸರ್ಕಾರಿ ಕಾಲುವೆಗಳ ಪಕ್ಷ ಫಲ ಬಿಡುವ ದೀರ್ಘಾವಧಿಯ ಮರಗಳನ್ನು ಬೆಳಸಲು ಸರ್ಕಾರ ಯಾವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ?

ಶ್ರೀ ಸಿ. ಪಿ. ಯೋಗೇಶ್ವರ (ಅರಣ್ಯ ಸಚಿವರು):–

ಅ) ಇಂತಹ ಪ್ರಕರಣಗಳು ಇರುವುದಿಲ್ಲ. ವನ್ಯಜೀವಿಗಳು ತಮ್ಮ ಆಹಾರಕ್ಕಾಗಿ ರಸ್ತೆ ಬದಿಯ ಮರಗಳನ್ನು ಆಶ್ರಯಿಸಿರುವುದಿಲ್ಲ. ಕೇವಲ ಪಕ್ಷಿಗಳು ರಸ್ತೆಬದಿಯ ಹಣ್ಣಿನ ಮರಗಳನ್ನು ಆಶ್ರಯಿಸಿ ಜೀವಿಸುತ್ತವೆ. ವನ್ಯಪ್ರಾಣಿಗಳು ಹಳ್ಳಿ ಪ್ರದೇಶಕ್ಕೆ ವಲಸೆ ಬರುವ ಮೂಲ ಕಾರಣ ಅವುಗಳ ವಾಸಸ್ಥಳವಾದ ಅರಣ್ಯ ನಾಶ, ಆಹಾರ ಮತ್ತು ನಿರಿನ ಲಭ್ಯತೆಯ ಕೊರತೆ. ಇದಲ್ಲದೆ ಕಾಡಂಚಿನ ರೈತರು ವನ್ಯಪ್ರಾಣಿಗಳಿಗೆ ಪ್ರಿಯವಾದ ಕಬ್ಬು, ಭತ್ತ ಇತ್ಯಾದಿ ಬೆಳೆಗಳನ್ನು ವರ್ಷವಿಡೀ ಬೆಳೆಸುವುದಾಗಿದೆ.

ಆ) ರಸ್ತೆಬದಿ ನೆಡುತೋಪುಗಳಲ್ಲಿ ಸ್ಥಳೀಯವಾದ ಮತ್ತು ದೀರ್ಘಕಾಲಿಕ ಜೀವಿಸುವ ಮತ್ತು ಫಲಬಿಡುವ ವೃಕ್ಷಗಳಾದ ಮಾವು, ನೇರಳೆ, ಹುಣಸೆ, ಹಿಪ್ಪೆ, ಆಲ, ಹಲಸು, ಗೋಣಿ ಇತ್ಯಾದಿ ಮರಗಳನ್ನು ಮಾತ್ರ ಬೆಳೆಸುವಂತೆ ನಿರ್ದೇಶಿಸಿ ಸುತ್ತೋಲೆ ಹೊರಡಿಸಲಾಗಿದ್ದು, ಇನ್ನು ಮುಂದೆ ರಸ್ತೆಬದಿ ನೆಡುತೋಪು ಬೆಳೆಸುವಾಗ ಇಂಥದೇ ಜಾತಿ ಮರಗಳನ್ನು ನೆಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೆರೆಗಳ ಬದಿ, ಸರ್ಕಾರಿ ಕಾಲುವೆಗಳ ಪಕ್ಕ ಮತ್ತು ಗುಂಡು ತೋಪುಗಳ ಅರಣ್ಯೀಕರಣಕ್ಕಾಗಿಯೇ ಯಾವುದೇ ನಿರ್ದಿಷ್ಟ ಯೋಜನೆ ಹಾಕಿ ಕೊಳ್ಳಲಾಗಿರುವುದಿಲ್ಲ. ಆದಾಗ್ಯೂ ಇಲಾಖೆ ಯೋಜನೆಗಳಾದ ವಿಶೇಷ ಅಭಿವೃದ್ಧಿ ಯೋಜನೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಗಳಲ್ಲಿ ಇಂಥಹ ಪ್ರದೇಶಗಳಲ್ಲಿ ನೆಡುತೋಪು ಬೆಳೆಸಲು ಕ್ರಮ ಕೈಗೊಳ್ಳಲಾಗುತ್ತಿದ್ದು. ಈ ನೆಡುತೋಪುಗಳಲ್ಲಿ ದೀರ್ಘಕಾಲಿಕ ಮರಗಳನ್ನು ನೆಟ್ಟು ಬೆಳೆಸಲಾಗುತ್ತಿದೆ.